# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1000
2. ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ
3. ಉತ್ತರಿಸುವ ದಿನಾಂಕ : 28/09/2020
4. ಉತ್ತರಿಸುವ ಸಚಿವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕಾರ್ಮಿಕ ಇಲಾಖೆ ಅಧಿಕಾರಿಗಳು ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದ್ದಾರೆ. ಈ ದಿಸೆಯಲ್ಲಿ ಸರಿಯಾಗಿ ಕಾರ್ಯನಿರ್ಹಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ. | ಕಾರ್ಮಿಕ ಇಲಾಖೆಯು ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ;<br>1. ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಕಲಂ 16 ಹಾಗೂ 17ರ ಅಡಿಯಲ್ಲಿ ನಿರೀಕ್ಷಕರಾಗಿ ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ, ತಪಾಸಣೆಗಳನ್ನು ಮಾಡಿಸಲಾಗುತ್ತಿದೆ.<br>2. ಸದರಿಯಂತೆ ಪ್ರತಿ ಜಿಲ್ಲೆಯಲ್ಲಿ ಕಾಲಕಾಲಕ್ಕೆ ನಿರಂತರವಾದ ಯೋಜಿತ ಹಾಗೂ ಅನಿರೀಕ್ಷಿತ ದಾಳಿಗಳನ್ನು ಇಲಾಖೆಯ ಅಧಿಕಾರಿಗಳು ಮತ್ತು ನಿರೀಕ್ಷಕರು ಮತ್ತು ಕಾಯ್ದೆಯ ಕಲಂ–17ರಡಿ ನೇಮಕಗೊಂಡ ನಿರೀಕ್ಷಕರು ನಡೆಸುತ್ತಿದ್ದು, ಬಾಲಕಾರ್ಮಿಕರನ್ನು ಪತ್ತೆ ಹಚ್ಚಿ ಅವರನ್ನು ಕೆಲಸದಿಂದ ಬಿಡುಗಡೆಗೊಳಿಸುತ್ತಿದ್ದು, ಕೆಲಸ ಮಾಡುತ್ತಿರುವ ಬಾಲಕಾರ್ಮಿಕರು ಪತ್ತೆಯಾದಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದ ಮಾಲೀಕರ ಮೇಲೆ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ರನ್ವಯ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.<br>3. ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕರಿಂದ ದುಡಿಸಿಕೊಳ್ಳುವುದು ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಕಲಂ 14ರ ರನ್ವಯ ಸಂಜ್ಞೇಯ ಅಪರಾಧವಾಗಿದ್ದು, ಈ ನಿಟ್ಟಿನಲ್ಲಿ ಮೊಕದ್ದಮೆಗಳನ್ನು ಹೂಡಲು ರಾಜ್ಯದ ಪೊಲೀಸ್ ಅಧಿಕಾರಿಗಳು ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ. |

| | | |
|---|---|---|
| | | ಕಾರ್ಮಿಕ ಇಲಾಖೆಯ ಅಧಿಕಾರಿಗಳು ಬಾಲಕಾರ್ಮಿಕ ಪದ್ಧತಿಯನ್ನು ರಾಜ್ಯಾದ್ಯಂತ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದು, ಈ ನಿಟ್ಟಿನಲ್ಲಿ ಸರಿಯಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳ ಕುರಿತು ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| ಆ | ಇದುವರೆಗೂ ರಾಜ್ಯದಲ್ಲಿ ಎಷ್ಟು ಬಾಲ ಕಾರ್ಮಿಕರನ್ನು ಗುರುತಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಇದುವರೆಗೂ ಗುರುತಿಸಲಾದ ಜಿಲ್ಲಾವಾರು ಬಾಲಕಾರ್ಮಿಕರ ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಇ | ಬಾಲ ಕಾರ್ಮಿಕರನ್ನು ಅವರ ಕೆಲಸದಿಂದ ಬಿಡುಗಡೆಗೊಳಿಸಿದ ಮೇಲೆ ಸರ್ಕಾರ ಯಾವ ರೀತಿ ಅವರಿಗೆ ಸಹಾಯ ಮಾಡುತ್ತಿದೆ ಹಾಗೂ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? | ಬಾಲಕಾರ್ಮಿಕರನ್ನು ಅವರ ಕೆಲಸದಿಂದ ಬಿಡುಗಡೆಗೊಳಿಸಿದ ಮೇಲೆ ಅವರಿಗೆ ಸರ್ಕಾರವು ಸಹಾಯ ಮಾಡುತ್ತಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ;<br><br>1. ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಕಲಂ 16 ಹಾಗೂ 17ರ ಅಡಿಯಲ್ಲಿ ನಿರೀಕ್ಷಕರಾಗಿ ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ, ಹಠಾತ್ ಹಾಗೂ ಯೋಜಿತ ದಾಳಿಗಳನ್ನು ನಡೆಸಿ, ಬಾಲಕಾರ್ಮಿಕರ ಪತ್ತೆ ಮಾಡಿ ನಂತರ ಅವರನ್ನು ಕೆಲಸದಿಂದ ಬಿಡುಗಡೆ ಮಾಡಿ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದ ಮಾಲೀಕರ ಮೇಲೆ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಪ್ರಾವಧಾನಗಳನ್ವಯ ನಡೆಸಲಾಗುತ್ತದೆ.<br><br>2. ಕೆಲಸದ ಸ್ಥಳಗಳಿಂದ ನಿಯಮಾನುಸಾರ ಬಿಡುಗಡೆಗೊಂಡ ಬಾಲಕಾರ್ಮಿಕರನ್ನು ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ (ಎನ್.ಸಿ.ಎಲ್.ಪಿ) ಹಾಗೂ ರಾಜ್ಯ ಬಾಲಕಾರ್ಮಿಕ ಯೋಜನೆ (ಎಸ್.ಸಿ.ಎಲ್.ಪಿ)ಗಳಡಿಯಲ್ಲಿ ನಡೆಸಲಾಗುತ್ತಿರುವ ಬಾಲಕಾರ್ಮಿಕ ವಿಶೇಷ ತರಬೇತಿ ಕೇಂದ್ರಗಳಲ್ಲಿ, ವಿವಿಧ ಶೈಕ್ಷಣಿಕ ಪುನರ್ವಸತಿ ಕೇಂದ್ರಗಳಲ್ಲಿ ಹಾಗೂ ಮುಖ್ಯವಾಹಿನಿ ಶಾಲೆಗಳಲ್ಲಿ, ಮಕ್ಕಳ ಅರ್ಹತೆಗನುಗುಣವಾಗಿ ಮತ್ತು ಸ್ಥಳೀಯ ಅವಶ್ಯಕತೆಗನುಗುಣವಾಗಿ ದಾಖಲು ಮಾಡಲಾಗುತ್ತದೆ.<br><br>3. ಹೀಗೆ ಪುನರ್ವಸತಿಗೊಳಿಸಲಾದ ಮಕ್ಕಳಿಗೆ ಶಿಕ್ಷಣ, ಊಟ, ವಸತಿ, ಬಟ್ಟೆ, ಪಠ್ಯಪುಸ್ತಕಗಳ ವ್ಯವಸ್ಥೆ ಜೊತೆಗೆ ಆರೋಗ್ಯ ತಪಾಸಣೆಯನ್ನೂ ಸಹ ನಡೆಸುವ ಮೂಲಕ ಆರೋಗ್ಯದ ಹಿತರಕ್ಷಣೆಯನ್ನು |

ಮಾಡಲಾಗುತ್ತದೆ. ಕೆಲವೊಮ್ಮೆ ಶಾಲೆಯಿಂದ ಹೊರಗುಳಿದ ಮಕ್ಕಳೆಂದು ಪತ್ತೆಯಾದಲ್ಲಿ ನೇರವಾಗಿ ಮುಖ್ಯ ವಾಹಿನಿ ಶಾಲೆಗಳಿಗೆ ದಾಖಲಿಸುವ ಕಾರ್ಯವನ್ನು ಮಾಡಿಸಲಾಗುತ್ತಿದೆ.

4. ಬಾಲಕಾರ್ಮಿಕ ವಿಶೇಷ ತರಬೇತಿ ಕೇಂದ್ರಗಳಲ್ಲಿ ಪ್ರತಿಯೊಬ್ಬ ಮಗುವಿನ ಭಾವಚಿತ್ರವುಳ್ಳ ಹೆಲ್ತ್‌ಕಾರ್ಡ್‌ಗಳನ್ನು ನಿರ್ವಹಿಸಲಾಗುತ್ತದೆ ಮತ್ತು ಮಗುವಿನ ಆರೋಗ್ಯದ ಮಾಹಿತಿಯನ್ನು ಹೆಲ್ತ್‌ಕಾರ್ಡ್‌ನಲ್ಲಿ ನಮೂದಿಸಲಾಗುತ್ತದೆ.

5. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರ ಪರಿಷ್ಕೃತ ಕಾಯ್ದೆಯನ್ವಯ ಕಾಯ್ದೆಯ ಕಲಂ 14-:"ಬಾಲಕಾರ್ಮಿಕ ಹಾಗೂ ಕಿಶೋರಕಾರ್ಮಿಕ ಪುನರ್ವಸತಿ ನಿಧಿ" ಅನ್ನು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ ಎಲ್‌ಡಿ 124 ಸಿಎಲ್‌ಸಿ 2016, ಬೆಂಗಳೂರು, ದಿನಾಂಕ:01/13/2019 ಅನ್ನು ಹೊರಡಿಸಿದ್ದು, ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

6. ಬಾಲಕಾರ್ಮಿಕ ಪದ್ಧತಿ(ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ಕ್ಕೆ 2016ರಲ್ಲಿ ಆಗಿರುವ ತಿದ್ದುಪಡಿಯನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿ ಮಾಡುವ ದಿಸೆಯಲ್ಲಿ ರಾಜ್ಯ ಸರ್ಕಾರವು ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿಯ ಬಾಲಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ) (ಕರ್ನಾಟಕ) ತಿದ್ದುಪಡಿ ನಿಯಮಗಳು-2017 ಅನ್ನು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ ಎಲ್ ಡಿ 113 ಸಿಎಲ್‌ಸಿ 2017(ಪಿ1) ಬೆಂಗಳೂರು, ದಿನಾಂಕ:04/10/2018 ರ ಮೂಲಕ ಕರ್ನಾಟಕ ರಾಜ್ಯಪತ್ರ ಸಂಪುಟ 153, ಸಂಚಿಕೆ 44 ದಿನಾಂಕ:08/11/2018 ರಲ್ಲಿ ಪ್ರಕಟಿಸಿದ್ದು, ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲಿ ಅನುಷ್ಠಾನಗೊಳಿಸಲಾಗುತ್ತಿದೆ.

7. ಪತ್ತೆಯಾದ ಬಾಲಕಾರ್ಮಿಕರಿಗೆ ವಸತಿ ಅವಶ್ಯಕತೆ ಇದ್ದಲ್ಲಿ ಅಂತಹ ಮಕ್ಕಳನ್ನು ಸರ್ಕಾರದಿಂದ ನಡೆಯುವ ಇತರೆ ಇಲಾಖೆಯ ವಸತಿ ಶಾಖೆ/ ಕೇಂದ್ರಗಳಲ್ಲಿ ಶಿಕ್ಷಣದ ಜೊತೆ ವಸತಿ ಕಲ್ಪಿಸಿ ಕ್ರಮ ಕೈಗೊಳ್ಳಲಾಗುವುದು.

8. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಪದ್ಧತಿಯನ್ನು ನಿರ್ಮೂಲನೆ ಮಾಡಲು ಮತ್ತು ಈ ಪದ್ಧತಿ ಕುರಿತು

| | | |
|---|---|---|
| | | ಸಾರ್ವಜನಿಕರಲ್ಲಿ ಜನ-ಜಾಗೃತಿ ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ;<br>i. ಪ್ರತಿ ವರ್ಷ ಜೂನ್ 12 ರಂದು, “ವಿಶ್ವ ಬಾಲ ಕಾರ್ಮಿಕ ಪದ್ದತಿ ವಿರೋದಿ ದಿನಾಚರಣೆ” ಯನ್ನು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಎಲ್ಲಾ ಭಾಗೀದಾರರು ಹಾಗೂ ಫಲಾನುಭವಿಗಳ ಸಹಯೋಗದೊಂದಿಗೆ ಆಯೋಜಿಸಲಾಗುತ್ತದೆ.<br>ii. ಕಾನೂನು ಅರಿವು ನೆರವು ಕಾರ್ಯಕ್ರಮಗಳು: ಸರ್ಕಾರೇತರ ಸಂಸ್ಥೆಗಳ ಹಾಗೂ ಎಲ್ಲಾ ಭಾಗೀದಾರರ ಸಹಯೋಗದೊಂದಿಗೆ ಕಾನೂನು ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.<br>iii. ತರಬೇತಿ ಕಾರ್ಯಕ್ರಮಗಳು: ಎಲ್ಲಾ ಅಧಿಸೂಚಿತ ನಿರೀಕ್ಷಕರಿಗೆ ಹಾಗೂ ಬಾಲಕಾರ್ಮಿಕ/ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಯಲ್ಲಿ ಭಾಗೀದಾರರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>iv. ಜಾಥಾ ಹಾಗೂ ಬೀದಿನಾಟಕಗಳ ಆಯೋಜನೆ: ಬಾಲಕಾರ್ಮಿಕ ಕಿಶೋರ ಕಾರ್ಮಿಕ ಪದ್ಧತಿಯ ನಿರ್ಮೂಲನೆಗಾಗಿ ಅರಿವು ಮೂಡಿಸುವ ಸಲುವಾಗಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಜಾಥಾ ಹಾಗೂ ಬೀದಿನಾಟಕಗಳನ್ನು ಆಯೋಜಿಸಲಾಗುತ್ತದೆ.<br>v. ಗೋಡೆ ಬರಹಗಳು ಹಾಗೂ ಸ್ಟಿಕರ್‌ಗಳು ಹಾಗೂ ಕರಪತ್ರಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ಹಂಚಲಾಗಿರುತ್ತದೆ.<br>vi. ಬಾಲಕಾರ್ಮಿಕ ಸಹಾಯವಾಣಿ: ಕಾರ್ಮಿಕ ಇಲಾಖೆಯಲ್ಲಿ ‘ಬಾಲಕಾರ್ಮಿಕ ಸಹಾಯವಾಣಿ’ ಸಂಖ್ಯೆ: 080-29752833 ಅನ್ನು ಸ್ಥಾಪಿಸಲಾಗಿದೆ. ಕಾನೂನು ಸೇವಾ ಪ್ರಾಧಿಕಾರಗಳ ಸಹಯೋಗದೊಂದಿಗೆ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕಾನೂನು ಅರಿವು-ನೆರವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಬಾಲಕಾರ್ಮಿಕ ಸಹಾಯವಾಣಿ ಸಂಖ್ಯೆ:1098 ಸಹ ಉಪಯೋಗಿಸಲಾಗುತ್ತಿದೆ. |

ಸಂಖ್ಯೆ: ಕಾಇ 37 ಸಿಎಲ್‌ಸಿ 2020

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ & ಸಕ್ಕರೆ ಸಚಿವರು

ಅನುಬಂಧ–1

ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 768(1000)

| Sl.No | District Name | ಬಾಲಕಾರ್ಮಿಕ/ ಕಿಶೋರ ಕಾರ್ಮಿಕ ಕಾಯ್ದೆ ಯಡಿ ರಕ್ಷಿಸಲ್ಪಟ್ಟ ಹಾಗೂ ಪುನರ್ವಸತಿಗೊಳಿಸಲಾದ ಬಾಲಕಾರ್ಮಿಕರ ಸಂಖ್ಯೆ | | | | ಗುರುತಿಸಲಾದ ಬಾಲಕಾರ್ಮಿಕರ ಸಂಖ್ಯೆ | | | |
|---|---|---|---|---|---|---|---|---|---|
| | | 2017 | 2018 | 2019 | 2020 (ಜನವರಿ ಯಿಂದ ಡಿಸೆಂಬರ್) | 2017 | 2018 | 2019 | 2020 (ಜನವರಿ ಯಿಂದ ಡಿಸೆಂಬರ್) |
| 1. | ಬೆಂಗಳೂರು (ಗ್ರಾ) | 20 | 04 | 07 | 01 | 14 | 04 | 07 | 01 |
| 2. | ಬೆಂಗಳೂರು ನಗರ | 07 | 22 | 11 | 13 | 07 | 22 | 37 | 09 |
| 3. | ತುಮಕೂರು | 4 | 01 | – | – | 6 | – | – | – |
| 4. | ಚಿಕ್ಕಬಳ್ಳಾಪುರ | 03 | 02 | 05 | 02 | 03 | 02 | 03 | – |
| 5. | ಕೋಲಾರ | 17 | – | 04 | 02 | 08 | – | 04 | 02 |
| 6. | ಮೈಸೂರು | 4 | 17 | 19 | 10 | 4 | 16 | 19 | 10 |
| 7. | ಮಂಡ್ಯ | 03 | 05 | 01 | – | 03 | 05 | 01 | — |
| 8. | ಚಾಮರಾಜನಗರ | 04 | – | 07 | 01 | 04 | – | 07 | 01 |
| 9. | ಮಂಗಳೂರು | 2 | 2 | 01 | 04 | 2 | 2 | 01 | – |
| 10. | ಉಡುಪಿ | – | 05 | – | – | – | 04 | – | – |
| 11. | ಶಿವಮೊಗ್ಗ | 05 | – | 03 | 02 | 05 | – | 03 | 02 |
| 12. | ಚಿಕ್ಕಮಗಳೂರು | 02 | – | – | – | 02 | – | 01 | – |
| 13. | ಹಾಸನ | 01 | 02 | 07 | 03 | 01 | 02 | 07 | 03 |
| 14. | ಮಡಿಕೇರಿ | 10 | 9 | 10 | 01 | 8 | 8 | 07 | 01 |
| 15. | ಬೆಳಗಾವಿ | 05 | 06 | 08 | 04 | 01 | 06 | 08 | 03 |

| | | | | | | | | | |
|---|---|---|---|---|---|---|---|---|---|
| 16. | ವಿಜಯಪುರ | 02 | 09 | 05 | 03 | 02 | 09 | 05 | – |
| 17. | ಬಾಗಲಕೋಟೆ | 11 | 01 | 01 | – | 09 | 01 | 01 | – |
| 18. | ಧಾರವಾಡ | – | – | – | – | – | – | – | – |
| 19. | ಗದಗ | – | – | 08 | – | – | – | 01 | – |
| 20. | ಕಾರವಾರ | – | – | – | – | – | – | – | – |
| 21. | ಹಾವೇರಿ | 02 | 06 | – | – | – | – | – | – |
| 22. | ದಾವಣಗೆರೆ | 06 | 08 | 05 | – | 03 | 03 | – | – |
| 23. | ಬಳ್ಳಾರಿ | 12 | 06 | 17 | 03 | 07 | 06 | 17 | 03 |
| 24. | ಚಿತ್ರದುರ್ಗ | – | 03 | 05 | – | – | 02 | 05 | – |
| 25. | ಕಲಬುರಗಿ | 36 | 08 | 08 | – | 36 | 08 | 03 | – |
| 26. | ಬೀದರ್ | 22 | 17 | 12 | 09 | 22 | 17 | 12 | 06 |
| 27. | ರಾಯಚೂರು | 2 | 10 | 01 | 04 | 2 | 10 | 01 | 04 |
| 28. | ಕೊಪ್ಪಳ | 44 | 7 | 82 | – | 01 | 7 | 02 | – |
| 29. | ರಾಮನಗರ | 11 | 7 | 05 | – | 11 | 7 | 05 | – |
| 30. | ಯಾದಗಿರಿ | 06 | – | 05 | – | 06 | – | 05 | – |
| | ಒಟ್ಟು | 241 | 157 | 237 | 62 | 167 | 141 | 162 | 45 |